# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 321 (410) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ. ನಿರಾಣಿ ಹಣಮಂತ್‌ರುದ್ರಪ್ಪ (ಪದವೀಧರರಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 07.12.2023 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ 'ಐ ತೀರ್ಪು' ಆಗಿ ಪರಿಹಾರ ಧನ ವಿತರಿಸದೇ ಇರುವ ಕ್ಷೇತ್ರಗಳೆಷ್ಟು; ಈ ಕ್ಷೇತ್ರಗಳಿಗೆ ನೀಡಬೇಕಾದ ಪರಿಹಾರ ಧನದ ಮೊತ್ತ ಎಷ್ಟು; | ಕೃಷ್ಣಾ ಮೇಲ್ದಂಡೆ ಯೋಜನೆಯಡಿ 1917ಎ–28ಗುಂ ಕ್ಷೇತ್ರಕ್ಕೆ ಐತೀರ್ಪು ಅನುಮೋದನೆಯಾಗಿ ರೂ.171.05 ಕೋಟಿಗಳ ಪರಿಹಾರ ಪಾವತಿಸಬೇಕಾಗಿದ್ದು, ವಿವರ ಈ ಕೆಳಗಿನಂತಿರುತ್ತದೆ.<br>1) ಆಡಿಟ್ ಆದ ರೂ.127.72 ಕೋಟಿ ಮೊತ್ತದ ಬಿಲ್‌ಗಳಿಗೆ ಅನುದಾನ ಬಿಡುಗಡೆ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.<br>2) ರೂ. 43.33 ಕೋಟಿ ಮೊತ್ತದ ಬಿಲ್‌ಗಳಿಗೆ ಆಡಿಟ್ ಮಾಡಲು ಪ್ರಸ್ತಾವನೆಯು ಸಲ್ಲಿಸುವಿಕೆಯ ಹಂತದಲ್ಲಿರುತ್ತದೆ.<br>ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಲಾಗಿರುವ ಆಯವ್ಯಯ ಅನುದಾನಕ್ಕನುಗುಣವಾಗಿ ಪರಿಹಾರ ಧನ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಪರಿಹಾರ ಧನ ವಿತರಿಸಲು ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ಹಾಗೂ ಪರಿಹಾರ ಧನವನ್ನು ಯಾವ ಕಾಲಮಿತಿಯೊಳಗೆ ಸಂತ್ರಸ್ಥರಿಗೆ ವಿತರಿಸಲಾಗುವುದು (ವಿವರನೀಡುವುದು) | |
| ಇ) | ವಿಶೇಷ ಭೂ–ಸ್ವಾಧೀನಾಧಿಕಾರಿಗಳ ಕಾರ್ಯಾಲಯದಿಂದ 'ಐ ತೀರ್ಪು' ಆಗಿ ಲೆಕ್ಕ ಪತ್ರ ಇಲಾಖೆಗೆ ಪರಿಹಾರ ಧನ ವಿತರಿಸಲು ಸಲ್ಲಿಸಿದ ಭೂ ಪರಿಹಾರದ ಮೊತ್ತ (Pending Bills) ಎಷ್ಟು; | ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯದಿಂದ 'ಐತೀರ್ಪು' ಆಗಿ ಮುಖ್ಯ ಲೆಕ್ಕಾಧಿಕಾರಿಗಳು, ಭೂಸ್ವಾಧೀನ, ಕೃಮೇಯೋ, ನವನಗರ ಬಾಗಲಕೋಟೆ ಇವರ ಕಛೇರಿಗೆ ರೂ.127.72 ಕೋಟಿ ಮೊತ್ತದ ಓಚರ್‌ಗಳು ಸ್ವೀಕೃತಿಯಾಗಿರುತ್ತವೆ. ಸದರಿ ಮೊತ್ತವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. |
| ಈ) | ನ್ಯಾಯಾಲಯದಿಂದ ಹೆಚ್ಚುವರಿ ಪರಿಹಾರ ಧನ ನೀಡುವಂತೆ ಆದೇಶವಾಗಿದ್ದರೂ ಇಲ್ಲಿಯವರೆಗೂ ಪರಿಹಾರ ಧನ ನೀಡದಿರಲು ಕಾರಣಗಳೇನು? (ವಿವರ ನೀಡುವುದು) | ನ್ಯಾಯಾಲಯಗಳ ಆದೇಶದ ಪ್ರಕಾರ ಹೆಚ್ಚುವರಿ ಪರಿಹಾರ ಪಾವತಿಗಾಗಿ ಸ್ವೀಕೃತವಾಗಿರುವ ಬಿಲ್ಲುಗಳ ಪೈಕಿ ಪೈಕಿ ಆಡಿಟ್ ಆದ ಬಿಲ್‌ಗಳಿಗೆ ಅನುದಾನ ಬಿಡುಗಡೆ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ ಹಾಗೂ ಉಳಿದ ಬಿಲ್‌ಗಳಿಗೆ ಆಡಿಟ್ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. |

**ಸಂಖ್ಯೆ: ಜಸಂಇ 125 ಡಬ್ಲ್ಯೂಬಿಎಂ 2023**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿಗಳು